## 1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.15317/2016

ದಿಃ 13.01.2021 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 4

ಚಾಸಾಃ 24

| | |
|---|---|
| ಹೆಸರು | ಃ ಡಾ.ಗಾಯತ್ರಿ |
| ಗಂಡನ ಹೆಸರು | ಃ ವೀರಪ್ರತಾಪ್ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ಕ್ಯಾಶುಯಲ್ಟಿ ಮೆಡಿಕಲ್ ಡಾಕ್ಟರ್, ಕೆ.ಸಿ ಜನರಲ್ ಆಸ್ಪತ್ರೆ. |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2011 ರಿಂದ ಇಲ್ಲಿಯವರೆಗೂ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ದಿಃ 01.02.2016 ರಂದು 00.10 ರ ಸಮಯದಲ್ಲಿ ಚಾಸಾ.1ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಪೊಲೀಸ್‌ನವರು ಕರೆದುಕೊಂಡು ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ತಲೆಯ ಎಡಭಾಗದಲ್ಲಿ 3 ಇಂಚಿನ ಹೊಲಿಗೆ ಹಾಕಿದ ಗಾಯ
2. ಬೆನ್ನಿನ ಕೆಳಭಾಗದಲ್ಲಿ ನೋವಿತ್ತು.

ಗಾಯಾಳು ಸಪ್ತಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಮ್ಮ ಆಸ್ಪತ್ರೆಗೆ ಬಂದಿದ್ದ. ನನ್ನ ಅಭಿಪ್ರಾಯದಲ್ಲಿ ಈ ಮೇಲ್ಕಂಡ 2 ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರತಿಸಲಾಯಿತು. ಈ

ಮೇಲೆ ಹೇಳಿದ ಗಾಯಗಳು ವ್ಯಕ್ತಿಯ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿದರೆ ಆಗಬಹುದು.

ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್‌ಆರ್ ವಕೀಲರಿಂದ:

ಸಪ್ತಗಿರಿ ಆಸ್ಪತ್ರೆಯ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ. ಒಬ್ಬ ವ್ಯಕ್ತಿ ಜಾರಿ ಬಿದ್ದಾಗ ನಿಪಿ.4 ರಲ್ಲಿ ತೆರೆದಂತಹ ಗಾಯಗಳು ಆಗುವ ಸಾಧ್ಯತೆ ಇದೆ. ಪೊಲೀಸ್‌ನವರು ಮತ್ತು ಗಾಯಾಳುವಿನ ಹೇಳಿಕೆಯ ಮೇರೆಗೆ ಅವರಿಗೆ ಸಹಾಯ ಮಾಡಲು ನಿಪಿ.4ನ್ನು ಕೊಟ್ಟಿದ್ದೇನೆಂದರೆ ಸರಿಯಲ್ಲ. ಚಾಸಾ.1ರವರ ತಲೆಯ ಗಾಯಕ್ಕೆ ಹೊಲಿಗೆ ಹಾಕಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ್‌ನವರು ಗುಂಪು ಘರ್ಷಣೆಯಲ್ಲಿ ಹಲ್ಲೆಯಾಗಿದೆ ಎಂದು ಹೇಳಿದರು. ಯಾರು ಹಲ್ಲೆ ಮಾಡಿದರು ಎಂದು ಹೇಳಿಲ್ಲ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ